

ಎರಡು ದಿನವೂ ಒಲ್ಲದ ಮ್ಯಾಗಿ ಮತ್ತು ಬ್ರೆಡ್ ಆಮ್ಲೇಟ್ ತಿಂದು ಉಪವಾಸ ವ್ರತವನ್ನು ಆಚರಿಸಿಕೊಂಡೆವು.

ನಮ್ಮನ್ನು ಇಳಿಸಿದ ತಕ್ಷಣ ಆದಿಲ್ "ನಿಮಗೆ ಇರುವುದು ಕೇವಲ ಇಪ್ಪತ್ತು ನಿಮಿಷ ಮಾತ್ರ. ಅಷ್ಟರಲ್ಲಿ ಲಗೇಜ್ ಇಟ್ಟು ಕ್ಯಾಮೆರಾ ತೊಗೊಂಡು ಬೇಗ ಬಂದು ಜೀಪಲ್ಲಿ ಕೂತುಬಿಡಿ. ಇಲ್ಲಿಂದ ತಕ್ಷಣವೇ ಸಫಾರಿಗೆ ಹೊರಡಬೇಕು. ಮತ್ತೊಂದು ಟಫ್ ಡ್ರೈವಿಂಗ್ ನೋಡಲು ರೆಡಿಯಾಗಿ ಎಂದು ಆರ್ಮಿ ಭಾಷೆಯಲ್ಲಿ ಖಡಕ್ ವಾರ್ನಿಂಗ್ ಕೊಟ್ಟನು. ಆಗ ಊಟ ಕೂಡ ಮಾಡಲು ಸಮಯ ಉಳಿದಿರಲಿಲ್ಲ. ತಕ್ಷಣ ಲಗೇಜನ್ನು ಒಯ್ದು ರೂಮಿನಲ್ಲಿ ಬಿಸಾಕಿ ಕ್ಯಾಮರಾ ಸರಿಮಾಡಿಕೊಂಡು ಬಂದೆವು. ಅವನು ಗುಟ್ಕಾ ಚೀಟಿ ಏರಿಸಿಕೊಂಡು ಸನ್ನದ್ಧನಾಗಿ ಕಾಯುತ್ತಿದ್ದ. ಅವನು ಊಟ, ಕಾಫಿ, ತಿಂಡಿ ಬಿಟ್ಟು ಬರೀ ಗುಟ್ಕಾ ತಿಂದೇ ಜೀವನ ಮಾಡುವ ವಿಚಿತ್ರ ವ್ಯಕ್ತಿಯಾಗಿ ನಮಗೆ ಕಂಡ.

ಸರಸರನೆ ಬಂದು ಮತ್ತೆ ಅದೇ ಜೀಪಿನಲ್ಲಿ ವಕ್ಕರಿಸಿದೆವು. ಮತ್ತೆ ಬಿಡುವಿಲ್ಲದ ಅವಸರದ ಪ್ರಯಾಣ ಶುರುವಾಯಿತು. ದುರ್ಗಮ ಕಾಡಿನ ಹಾದಿಯಲ್ಲಿ ಮತ್ತೆ ಸುಮಾರು ಮುಕ್ಕಾಲು ಗಂಟೆಗಳ ಪ್ರಯಾಣ. ಈ ರಸ್ತೆ ಅದೆಷ್ಟು ಭೀಕರವಾಗಿತ್ತು ಎನ್ನುವುದನ್ನು ವಿವರಿಸಲಿಕ್ಕೆ ಪದಗಳೂ ಸಾಕಾಗುವುದಿಲ್ಲ ಅಂತಹ ಭೀಕರ ಕಲ್ಲು ರಸ್ತೆ. ಒಂದು ಕಡೆ ಹಸಿವು, ಮತ್ತೊಂದು ಕಡೆ ಮೈಕೈನೋವು ತೀವ್ರವಾಗಿ ಕಾಡತೊಡಗಿದವು. ಭೀಕರ ಪ್ರಯಾಣದ ಹೊಡೆತಕ್ಕೆ ಆಯಾಸ ಹೆಚ್ಚಾಗಿ "ಥೂ ಈ ಸುಡುಗಾಡು ಫೋಟೋಗ್ರಫಿಯ ಸಹವಾಸವೇ ಬೇಡಪ್ಪ" ಎಂದು ಮುಲುಕುವಂತಾಯಿತು.

"ಇವತ್ತು ಹುಲಿಗಳು ಸಿಕ್ಕೇ ಸಿಗುವ ಸಂದರ್ಭ ಜಾಸ್ತಿ ಇದೆ. ಮೂರು ನಾಲ್ಕು ದಿನದಿಂದ ಸೈಟಿಂಗ್ ಆಗದೆ ಗೆಸ್ಟ್ ಬೇಜಾರಾಗಿ ವಾಪಸ್ಸು ಹೋಗಿದ್ದಾರೆ. ಹಾಳಾದ ಮಳೆ ಎಲ್ಲಾ ಹಾಳು ಮಾಡಿ ಹಾಕಿದೆ. ನಿಮಗೆ ಟೈಗರ್ ಚಾನ್ಸ್ ಮಿಸ್ ಆಗೋದು ಬೇಡಾಂತ ಎಲ್ಲಾ ಕಡೆ ಅವಸರ ಮಾಡ್ದೆ. ನಂಗೊತ್ತು ನಿಮಗೆ ತೊಂದರೆ ಕಸಿವಿಸಿ ಆಗಿದೇಂತ. ಏನು ಮಾಡೋ ಹಂಗಿಲ್ಲ. ನೀವು ಇವತ್ತು ಇದೆಲ್ಲಾ ತೊಂದರೆ ಸಹಿಸಿಕೊಳ್ಳಲೇಬೇಕು. ಹಾಗೆಯೇ ದಯಮಾಡಿ ನನ್ನ ಕ್ಷಮಿಸಬೇಕು" ಎಂದು ಆತ ವಿನಯವಾಗಿ ಹೇಳಿದ. ಮೊದಮೊದಲು ಯಮನಂತೆ ಬಾಧಿಸಿ, ಸಿಡುಕನಂತೆ ಕಂಡ ಆದಿಲ್ಲನ ವೃತ್ತಿ ಬದ್ಧತೆ ನೋಡಿ ಹೆಮ್ಮೆ ಎನಿಸಿತು.